ಮೂಲ ದಾವಾ ನಂ. 101/2018

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 13-12-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ. ಎಸ್. ಬಿ. ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಅಫಿಡಾವಿಟ್ ಬಗ್ಗೆ ಮಾಹಿತಿ ನನಗೆ ಇದೆ. ಅದರಲ್ಲಿ ಏನೇನು ಬರೆದಿದ್ದಾರೆ ಎಂದು ನನಗೆ ಗೊತ್ತಿದೆ. ಸದ್ರಿ ಅಪಿಡಾವಿಟ್ ನಲ್ಲಿ ನನ್ನ ತಂದೆಯ ಜಮೀನನ್ನು ವಿಭಾಗಮಾಡಿಕೊಡಬೇಕು ಎಂದು ಬರೆಯಲಾಗಿದೆ. ಪ್ರಮಾಣಪತ್ರ ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ತಂದೆ 2010 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಇದ್ದರು. ಈ ವಿಚಾರವನ್ನು ದಾವಾ ಪತ್ರದಲ್ಲಿ ತಿಳಿಸಿರುತ್ತೇನೆ. ನನ್ನ ತಂದೆಯ ಮೊದಲ ಹೆಂಡತಿ ಯಾವ ವರ್ಷದಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ತಂದೆಯ ಮೊದಲ ಹೆಂಡತಿಗೆ ಒಬ್ಬನೇ ಮಗ ಇದ್ದು ಆತನ ಹೆಸರು ಮಾರುತಿಯಾಗಿರುತ್ತದೆ. ಎರಡನೇ ಹೆಂಡತಿಗೆ ಇಬ್ಬರು ಹೆಣ್ಣು ಮಕ್ಕಳು, ಒಂದು ಗಂಡು ಮಗು ಇತ್ತು. ಹೆಣ್ಣು ಮಕ್ಕಳು ಎಂದರೆ ನಾನು ಮತ್ತು ಪ್ರೇಮಾ ಆಗಿರುತ್ತೇವೆ. ಗಂಡು ಮಗು ಎಂದರೆ ಸುಬ್ರಹ್ಮಣ್ಯ ಆಗಿರುತ್ತಾರೆ. ಈ ಎಲ್ಲಾ ವಿಚಾರವನ್ನು ನಾನು ದಾವಾ ಪತ್ರದಲ್ಲಿ ಹೇಳಿ ಬರೆಸಲು ನನಗೆ ತೊಂದರೆ ಇರಲಿಲ್ಲ. ನನ್ನ ತಂದೆ ಮೃತಪಡುವಾಗ ಅವರಿಗೆ ಒಂದೇ ಸರ್ವೆ ನಂಬರ್ ಜಾಗದಲ್ಲಿ ಹಕ್ಕು ಇತ್ತು. ಸದ್ರಿ ಆಸ್ತಿಯ ಮೇಲೆ ನನ್ನ ತಂದೆಗೆ ಹೇಗೆ ಹಕ್ಕು ಬಂತು ಎಂದು ನನಗೆ ಗೊತ್ತಿಲ್ಲ. ಸದ್ರಿ ಆಸ್ತಿ ನನ್ನ ತಂದೆ ಅತಿಕ್ರಮಣ ಮಾಡಿ ನಂತರ ಅವರ ಹೆಸರಿಗೆ ಅದು ಮಂಜೂರು ಆಗಿರುತ್ತದೆ. ಆ ರೀತಿ ಮಂಜೂರು ಆಗುವ ಪೂರ್ವದಲ್ಲಿ ಸದ್ರಿ ಆಸ್ತಿಯ ಮೇಲೆ ಬೇರೆ ಯಾರಿಗೂ ಹಕ್ಕು ಇರಲಿಲ್ಲ ಎಂದರೆ ಸರಿ. ನನ್ನ ತಂದೆ ಅತಿಕ್ರಮಣ ಮಾಡಿ ಮಂಜೂರು ಆದ ಆಸ್ತಿ ಎಂದು ನಾನು ವಾದ ಪತ್ರ ತಯಾರಿಸುವಾಗ ವಕೀಲರಿಗೆ ತಿಳಿಸಿರುತ್ತೇನೆ.

ನನ್ನ ಮದುವೆ 1991 ಎಪ್ರಿಲ್ ತಿಂಗಳಿನಲ್ಲಿ ಆಗಿರುತ್ತದೆ. ನನ್ನ ಮದುವೆ ನನ್ನ ತಂದೆ ತಾಯಿಯ ಒಪ್ಪಿಗೆಯ ಮೇರೆಗೆ ಆಗಿತ್ತು. ದಾವೆ ದಾಖಲಿಸುವ ಪೂರ್ವದಲ್ಲಿ ದಾವಾ ಆಸ್ತಿಯ ಕುರಿತು ದಾಖಲೆಯನ್ನು ನೋಡಿರುತ್ತೇನೆ. ನನ್ನ ತಂದೆ ಆತನ ಆಸ್ತಿಯ ಕುರಿತು ಆತ ಜೀವಂತ ಇರುವಾಗ ವಾಂಟಣೆ ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಬೆಳೆ ಸಾಲದ ಸಲುವಾಗಿ ಅವರಿಗೆ ಮೌಖಿಕವಾಗಿ ವಾಂಟಣೆ ಮಾಡಿದ್ದು ದಸ್ತಾವೇಜು ಆಗಿರಲಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವನ್ನು ದಾವೆ ದಾಖಲಿಸುವ ಸಮಯದಲ್ಲಿ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಆ ಪ್ರಕಾರ ನನ್ನ ಇಬ್ಬರು ಸಹೋದರರು ಪ್ರತ್ಯೇಕ ಮನೆ ಕಟ್ಟಿಕೊಂಡು ಪ್ರತ್ಯೇಕ ಸ್ವಾಧೀನತೆ ಹೊಂದಿದ್ದರು ಎಂದರೆ ಸರಿ. ಆ ರೀತಿ ಅವರು ಪ್ರತ್ಯೇಕ ವಾಸಿಸಲು ಪ್ರಾರಂಭಿಸಿ ಸುಮಾರು 30 ವರ್ಷವಾಯಿತು. ಆ ರೀತಿ ಪ್ರತ್ಯೇಕ ಮಾಡಿಕೊಡುವಾಗ ನನ್ನ ತಂದೆ ಕೂಡಾ ಒಂದು ಶೇರನ್ನು ಹೊಂದಿದ್ದರು ಎಂದರೆ ಸರಿ. ಅವರಿಗೆ ಬಂದ ಶೇರಿನಲ್ಲಿ ನನ್ನ ತಂದೆ ಮನೆ ಕಟ್ಟಿಕೊಂಡು ಅದನ್ನು ಅಭಿವೃದ್ಧಿಪಡಿಸಿದ್ದರು ಎಂದರೆ ಸರಿ. ಆ ಬಗ್ಗೆ ಗ್ರಾಮ ರೆಕಾರ್ಡಿನಲ್ಲಿ ಹೆಸರುಗಳು ಬದಲಾವಣೆ ಆಗಿರುತ್ತವೆ ಎಂದರೆ ಸರಿಯಲ್ಲ.

ಬೆಳೆ ಸಾಲ ಬೇಕಾದರೆ ಸಾಲಗಾರನ ಹೆಸರಿಗೆ ಪ್ರತ್ಯೇಕ ಭೂಮಿ ಇರಬೇಕು ಎಂದರೆ ಸರಿ. ನನ್ನ ತಂದೆ ದಾವಾ ಆಸ್ತಿಯನ್ನು 1999 ರಲ್ಲಿಯೇ ವಿಭಾಗಮಾಡಿಕೊಟ್ಟಿದ್ದು ಅದರ ಪ್ರಕಾರ ಸಾಲ್ಕೋಡು ಗ್ರಾಮದ ಎಂ ಆರ್ ನಂ. 73/67 ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 1999 ರಲ್ಲಿಯೇ ದಾವಾ ಆಸ್ತಿಯಲ್ಲಿ 30 ಗುಂಟೆ ಜಾಗವನ್ನು ನನ್ನ ತಂದೆ ಜೀವಂತ ಇರುವಾಗಲೇ 1 ನೇ ಪ್ರತಿವಾದಿಗೆ ಹಿಸ್ಸೆ ಮಾಡಿ ಕೊಡಲಾಗಿತ್ತು ಎಂದರೆ ಸಾಕ್ಷಿ ಅದು ಬೆಳೆ ಸಾಲದ ಸಲುವಾಗಿ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಾಯಿ ಮಾದೇವಿ 2017 ರಲ್ಲಿ ಮೃತಪಟ್ಟಿರುತ್ತಾರೆ. ಮೊದಲು ನನ್ನ ತಂದೆಗೆ ಇದ್ದ ಆಸ್ತಿ ಅವರು ಮೃತಪಟ್ಟ ನಂತರ ನನ್ನ ತಾಯಿಯ ಹೆಸರಿಗೆ ಆಗಿರುತ್ತದೆ.

ಪ್ರತಿವಾದಿಯರು ದಾಖಲಿಸಿದ ಉದಾಹರಣೆಯನ್ನು ನಾನು ನೋಡಿರುವುದಿಲ್ಲ. ಷದ್ರಿ ಉದಾಹರಣೆಗೆ ನಾನು ಯಾವದೇ ರಿಜ್ಯೊಂಡರನ್ನು ಹಾಕಿರುವುದಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಹೊನ್ನಾವರ.